ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಆದಷ್ಟು ಬೇಗ ನಾವು ಮಾಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್ :– ಇದು ಹರಪನಹಳ್ಳಿ ವಿಚಾರ ಮಾತ್ರ ಅಲ್ಲ. ಈಗಾಗಲೇ ಮೂರು ಸಮಿತಿಗಳು ಆಗಿ ಸರ್ಕಾರಕ್ಕೆ ರಿಪೋರ್ಟ್‌ಗಳು ಬಂದಿವೆ. ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಸಹ ಇದು ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಇದರ ಮಧ್ಯೆ ಒಮ್ಮೊಮ್ಮೆ ಬೇರೆ ಕಡೆಯಿಂದ ರಿಪೋರ್ಟ್ ಬರುತ್ತದೆ ಅದೇನೆಂದರೆ ಮಾನ್ಯ ಸಚಿವರು ಬೇರೆ ಕಡೆಗಳಿಗೆ ಹೋದಾಗ ಮತ್ತು ಅವರಿಗೆ ಮನವಿ ಗಳನ್ನು ಕೊಟ್ಟಾಗ ಇಂಥಹ ಕಡೆಯಲ್ಲಿ ಕೂಡಲೇ ಜಿಲ್ಲೆಯನ್ನು ಮಾಡಲಾಗುವದು. ತಾಲೂಕು ಮಾಡಲಾಗುವದು ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಒಂದೊಂದು ಕಡೆ ಮಾತ್ರ ತೆಗೆದುಕೊಳ್ಳುತ್ತೀರೋ ಅಥವಾ ಸಮಗ್ರವಾಗಿ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡುತ್ತೀರೋ ? ಏಕೆಂದರೆ ಹೀಗೆ ಮಾಡುವುದು ಬಹಳ ಮುಖ್ಯ ಇದೆ. ಇದರ ಬಗ್ಗೆ ಕೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕರ್ನಾಟಕ ರಾಜ್ಯದ ಬಗ್ಗೆಯೇ ಸಮಗ್ರವಾಗಿ ವಿಚಾರ ಮಾಡಿಯೇ ರಿಪೋರ್ಟ್ ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಜಿಲ್ಲೆ ಈ ವರ್ಷ ತೆಗೆದುಕೊಳ್ಳಬೇಕು, ಎಷ್ಟು ಜಿಲ್ಲೆಗಳನ್ನು ಮುಂದಿನ ವರ್ಷ ತೆಗೆದುಕೊಳ್ಳ ಬಹುದು ಎಂಬುದು ನಮ್ಮ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸಿದೆ. ಈ ವರ್ಷ ಒಂದು ಮಾಡಬಹುದು, ಎರಡು ಮಾಡಬಹುದು ಅಥವಾ ಒಂದೇ ತಾಲೂಕನ್ನು ಡಿಕ್ಲೇರ್ ಮಾಡಬಹುದು ಅದಕ್ಕಾಗಿ ಆ ಸಬ್ ಕಮಿಟಿ ರಿಪೋರ್ಟ್ ಬಂದ ಮೇಲೆ ಎಷ್ಟು ತಾಲ್ಲೂಕು ಮಾಡಬಹುದು. ಎಷ್ಟು ಜಿಲ್ಲೆ ಮಾಡಬಹುದು ಎನ್ನುತಕ್ಕಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ವಿಷಯ : ಕಾಫಿ ತೋಟದ ಮಾಲೀಕರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೬೩ (೧೧೪೪೩)

ಶ್ರೀಮತಿ ನೋಟಮ್ಮ (ಮೂಡಿಗೆರೆ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನ ಕಾಫಿ ತೋಟದ ಮಾಲೀಕರಿದ್ದಾರೆ ? ಎಷ್ಟೆಷ್ಟು ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ (ಪಟ್ಟಿ ಕೊಡುವುದು) ?

ಆ) ಇದರಲ್ಲಿ ಎಷ್ಟು ಜನ ಹರಿಜನ-ಗಿರಿಜನರಿದ್ದಾರೆ ? ಇವರುಗಳು ಎಷ್ಟೆಷ್ಟು ಎಕರೆ ಕಾಫಿ ತೋಟದ ಮಾಲೀಕರಾಗಿದ್ದಾರೆ (ಪಟ್ಟಿ ಮಾಡುವುದು) ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ೧೫,೬೮೬ ಜನರು. ೧,೫೮,೬೮೦.೩೬ ಎಕರೆಗಳು

ಆ) ೪೪೦ ಜನರು ೧,೮೨೦.೦೩ ಎಕರೆಗಳು.

ಶ್ರೀಮತಿ ಮೋಟಮ್ಮ :– ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನ ಕಾಫಿ ತೋಟದ ಮಾಲೀಕರಿದ್ದಾರೆ ಮತ್ತು ಎಷ್ಟೆಷ್ಟು ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ ಎಂಬ ಬಗ್ಗೆ ಪಟ್ಟಿಯೊಡನೆ ವಿವರ ಕೊಡಿ ಎಂದರೆ ಇಲ್ಲಿ ಪಟ್ಟಿಯನ್ನೇ ಕೊಟ್ಟಿಲ್ಲ. ಇಲ್ಲಿ ಹತ್ತು ಶೀಟುಗಳ ಉತ್ತರ ಕೊಟ್ಟಿದ್ದಾರೆ. ನಾನು ಅವುಗಳನ್ನು ತೆಗೆದು ನೋಡಿದೆ. ಹಾಗೇನೆ ಇದರಲ್ಲಿ ಎಷ್ಟು ಜನ ಹರಿಜನ–ಗಿರಿಜನರು ಎಷ್ಟೆಷ್ಟು ಎಕರೆ ಕಾಫಿ ತೋಟದ ಮಾಲೀಕರು ಆಗಿದ್ದಾರೆ ಎಂದು ಪಟ್ಟಿ ಕೇಳಿದ್ದೆ. ಆದರೆ ಪಟ್ಟಿ ಬಂದಿಲ್ಲ. ಎಷ್ಟು ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ ಎಂದು ಸುಮ್ಮನೆ ಟೋಟಲ್ ಆಗಿ ಹೇಳಿದ್ದಾರೆ. ಒಟ್ಟು ಇತರೆ ವರ್ಗದವರು ಸುಮಾರು ೧೫.೬೮೬ ಜನ ಕಾಫಿ ತೋಟದ ಒಡೆತನ ಹೊಂದಿದ್ದರೆ, ಅವರು ಹೊಂದಿರುವ ಕಾಫಿ ತೋಟದ ವಿಸ್ತೀರ್ಣ ೧ ಲಕ್ಷ ೫೮ ಸಾವಿರ ಎಕರೆ. ಹಾಗೂ ಹರಿಜನ–ಗಿರಿಜನ ೪೪೦ ಜನ ಕಾಫಿ ತೋಟದ ಮಾಲೀಕರು ಇದ್ದಾರೆ ಮತ್ತು ೧.೮೨೦ ಎಕರೆ ಎಸ್ಟೇಟ್ ಹೊಂದಿದ್ದಾರೆ ಎಂದು ಹೇಳುತ್ತಾರೆ. ಈ ೪೪೦ ಜನ ಹರಿಜನರು ಕಾಫಿ ತೋಟದ ಒಡೆತನ ಹೊಂದಿದ್ದಾರೆ ಎಂದು ಹೇಳಿದರೆ ನಾನು ಒಪ್ಪಲಿಕ್ಕೆ ತಯಾರಿಲ್ಲ. ಏಕೆಂದರೆ ಪಟ್ಟಿ ಕೊಟ್ಟಿಲ್ಲ ನನಗೆ ಗೊತ್ತಿರುವ ಹಾಗೆ ಮೂಡಿಗೆರೆ ತಾಲೂಕಿನಲ್ಲಾಗಲೀ ಅಥವಾ ಇಡೀ ಜಿಲ್ಲೆಯಲ್ಲಾಗಲೀ ಇಷ್ಟು ಜನ ಇರುವುದು ಭಾರಿ ಆಪರೂಪ. ಇದರಿಂದ ಏನಾಗುತ್ತದೆ ಎಂದರೆ ಈಗಿನ ಕಾಯ್ದೆ ಪ್ರಕಾರ ೫೦ ಪರ್ಸೆಂಟ್ ಜಮೀನನ್ನು ಹರಿಜನ–ಗಿರಿಜನರಿಗೆ ಕೊಡಬೇಕೆಂದು ಇದ್ದರೂ ಕೂಡ ಇಲ್ಲಿರುವ ವ್ಯತ್ಯಾಸ ನೋಡಿದರೆ ಒಂದು ಪರ್ಸೆಂಟ್ ಕೂಡ ಸಿಕ್ಕಿಲ್ಲ ಎಂಬುದು ಗೊತ್ತಾಗುತ್ತದೆ. ಈ ತಾರತಮ್ಯವನ್ನು ಹೇಗೆ ಹೋಗಲಾಡಿಸುತ್ತೀರಿ ? ಎಡನೇಯದು ಈಗಾಗಲೇ ಒತ್ತುವರಿಯಾದ ಜಮೀನನ್ನು ಸಕ್ರಮಗೊಳಿಸುವ ಬಿಲ್ ಬರುತ್ತಿದೆ. ಇದರಲ್ಲಿ ಏನಾಗಿದೆ ಎಂದರೆ ಇಡೀ ರಾಜ್ಯದಲ್ಲಿ ೬ ಲಕ್ಷ ಎಕರೆ ಒತ್ತುವರಿಯಾಗಿದೆ. ಅದರಲ್ಲಿ ಹರಿಜನರು ಮತ್ತು ಗಿರಿಜನರು ಒತ್ತುವರಿ ಮಾಡಿರುವುದು ಕೇವಲ ಒಂದು ಲಕ್ಷ ಚಿಲ್ಲರೆ ಮಾತ್ರ ಇದರಲ್ಲಿ ೫೦ ಪರ್ಸೆಂಟ್ ನಷ್ಟು ಕೂಡ ಹರಿಜನ–ಗಿರಿಜನರಿಗೆ ಒತ್ತುವರಿಯಲ್ಲಿ ಖಾಯಂ ಮಾಡುವದಕ್ಕೆ ಆಗುತ್ತಿಲ್ಲ. ಈ ತಾರತಮ್ಯವನ್ನು ಹೇಗೆ ಹೋಗಲಾಡಿಸುತ್ತೀರಿ ? ಬರೇ ೫೦ ಪರ್ಸೆಂಟ್ ಲ್ಯಾಂಡ್ ಗ್ರ್ಯಾಂಟ್ ನಲ್ಲಿ ಲ್ಯಾಂಡ್ ಕೊಡುತ್ತೇವೆಂದು ಹೇಳಿಬಿಟ್ಟು ತೃಪ್ತಿಪಡಿಸುವ ಹಾಗೆ ಕಾಣುತ್ತದೆ ಇದನ್ನು ಹೇಗೆ ಸರಿಪಡಿಸುತ್ತೀರಿ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಬೇಕು ಮತ್ತು ಏತಕ್ಕೆ ನಾನು ಕೇಳಿದ ಪಟ್ಟಿಯನ್ನು ಕೊಟ್ಟಿಲ್ಲ ಎನ್ನುವದನ್ನು ಹೇಳಬೇಕೆಂದು ಕೇಳುತ್ತೇನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅಧ್ಯಕ್ಷರೇ ಅವರು ಕೇಳಿದ ಪ್ರಶ್ನೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನ ಕಾಫಿ ತೋಟದ ಮಾಲೀಕರಿದ್ದಾರೆ. ಎಷ್ಟೆಷ್ಟು ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ ಎಂದು, ಇದಕ್ಕೆ ಉತ್ತರ ಒದಗಿಸಿದ್ದೇವೆ.

೧೫,೬೬೬ ಜನ ಕಾಫಿ ತೋಟದ ಮಾಲೀಕರಿದ್ದಾರೆ. ಅವರು ೧,೫೮,೭೮೦ ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ. ಆಮೇಲೆ ಎಷ್ಟು ಜನ ಹರಿಜನ-ಗಿರಿಜನರಿದ್ದಾರೆ ಎಂದು ಕೇಳಿದ್ದಾರೆ, ೮೪೦ ಜನರು ಇದ್ದಾರೆಂದೂ, ೧,೮೨೦ ಎಕರೆ ಹೊಂದಿದ್ದಾರೆಂದೂ ಹೇಳಲಾಗಿದೆ. ಇದು ಒತ್ತುವರಿ ಪ್ರಶ್ನೆ ಅಲ್ಲ ಕಾಫಿ ಪ್ಲಾಂಟರ್ಸ್ ಎಷ್ಟು ಜನ ಇದ್ದಾರೆಂದು ಕೇಳಿರುವದಕ್ಕೆ ಇಷ್ಟು ಜನ ಎಂದು ಹೇಳಿದ್ದೇನೆ. ಇವತ್ತು ೧೮ ಸಾವಿರ ಜನ ಎಂದು ಹೇಳಿದರೆ ಒಂದು ವೋಟರ್ಸ್ ಲಿಸ್ಟ ಆದಷ್ಟು ಪಟ್ಟಿಯಾಗುತ್ತದೆ. ಇದನ್ನು ನೀವು ಒದಗಿಸಿ ಕೊಡಿ ಎಂದು ಹೇಳಿದರೆ.

ಅಧ್ಯಕ್ಷರು :– ಶ್ರೀಮತಿ ಮೋಟಮ್ಮನವರು ಮುಂದಿನ ಚುನಾವಣೆಗೆ ಈಗಲೇ ತಯಾರು ಆಗುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇಷ್ಟು ಜನರ ಹೆಸರಿನ ಪಟ್ಟಿ ಮತ್ತಿತರ ವಿವರಗಳನ್ನು ಕೊಡಬೇಕಾದರೆ ಒಂದು ವೋಟರ್ಸ್ ಲಿಸ್ಟ್ ಕೊಟ್ಟಹಾಗೆ ಆಗುತ್ತದೆ. ಅದಕ್ಕಾಗಿ ಕನ್ಸಾಲಿಡೇಟೆಡ್ ಆಗಿ ಒಂದು ಫಿಗರ್ಸ್ ಕೊಡಲಾಗಿದೆ.

ಶ್ರೀಮತಿ ಮೋಟಮ್ಮ :– ನಾನು ಕೇಳಿರುವದು ಎಸ್ಟೇಟ್ ವೋನರ್ಸ್ ಎಂದರೆ ೨೫ ಎಕರೆ

ಅಧ್ಯಕ್ಷರು :– ನೀವು ಇಷ್ಟು ಕೇಳಬಹುದಿತ್ತು, ಪರಿಶಿಷ್ಟ ವರ್ಗದವರಿಗೆ ಸೇರಿದಂತೆ ಎಷ್ಟು ಎಕರೆ ಪ್ಲಾಂಟೇಶನ್ ಇದೆ, ಎಷ್ಟು ಕುಟುಂಬಗಳು ಇವೆಯೆಂದು ಕೇಳಿದ್ದರೆ, ಸರಿಯಾಗುತ್ತಿತ್ತು. ಎಷ್ಟು ಜನ ಪ್ಲಾಂಟರ್ಸ್ ಇದ್ದಾರೆ, ಎಷ್ಟೆಷ್ಟು ಎಕರೆ ಪ್ಲಾಂಟೇಶನ್ ಇದೆ ಎಂದು ಕೇಳಿದರೆ ಹೇಗೆ ? ಈ ಸದನದ ಅವಧಿಇನ್ನೂ ೪ ವರ್ಷ ಇದೆ ಆದ್ದರಿಂದ

ಶ್ರೀಮತಿ ಮೋಟಮ್ಮ :– ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಅವರು ಏನೂ ಪಟ್ಟಿಯನ್ನು ಓದಬೇಕಾಗಿರಲಿಲ್ಲ, ನಾನು ನೋಡಿಕೊಳ್ಳುತ್ತಿದ್ದೆ.

ಅಧ್ಯಕ್ಷರು :– ನೀವು ಸ್ಪಷ್ಟವಾಗಿ ಕೇಳುತ್ತೀರಿ, ಆದರೆ, ಅವರು ಉತ್ತರ ಕೊಡಬೇಕಲ್ಲ ಇದು ಜನಗಣತಿ ಅಲ್ಲ, ಆ ಜನಗಣತಿ ಎಲ್ಲಿ ಸಿಗುತ್ತದೆ ? ಇದು ಪ್ಲಾಂಟೇಶನ್ ಗಣತಿ.

ಶ್ರೀಮತಿ ಮೋಟಮ್ಮ :– ಎಸ್ಟೇಟ್ ವೋನರ್ಸ್ ಆಗಬೇಕಾದರೆ ೨೫ ಎಕರೆಗೆ ಮೇಲ್ಪಟ್ಟು ಇರಬೇಕು. ಇಲ್ಲಿ ೧೫,೬೬೬ ಜನ ಬೇರೆ ಬೇರೆ ವರ್ಗದ ಪ್ಲಾಂಟರ್ಸ್ ಇದ್ದಾರೆಂದು ಕೊಟ್ಟಿದ್ದಾರೆ. ಇದರಲ್ಲಿ ೮೪೦ ಜನ ಹರಿಜನ-ಗಿರಿಜನ ಎಂದು ಹೇಳುತ್ತಾರೆ. ಇವರೂ ಸಹ ೨೫ ಎಕರೆಗಿಂತ ಹೆಚ್ಚು ವೋನರ್ ಆಗಿರಬೇಕು. ಇದು ಇದ್ದಹಾಗೆ ಕಾಣುತ್ತಾ ಇಲ್ಲ ಈ ದೃಷ್ಟಿಯಿಂದ ಪ್ರಶ್ನೆ ಹಾಕಿದ್ದೇನೆ. ಪಟ್ಟಿ ಕೊಟ್ಟಿದ್ದರೆ. ನಮ್ಮ ಜಿಲ್ಲೆಯಲ್ಲಿ ಎಷ್ಟು ಜನ ಹರಿಜನರು ಪ್ಲಾಂಟೇಷನ್ ಮಾಡಿಕೊಂಡಿದ್ದಾರೆ ಎಂಬುದು ನನಗೂ ಗೊತ್ತಾಗುತ್ತಿತ್ತು. ಜೊತೆಗೆ ಲ್ಯಾಂಡ್ ಹಂಚಿಕೆಯಲ್ಲೂ

ತಾರತಮ್ಯವಾಗುತ್ತಿದೆ ಎಂಬುದು ಜನತೆಗೆ ಗೊತ್ತಾಗುತ್ತದೆ. ಈ ಸದನಕ್ಕೆ ಗೊತ್ತಾಗುತ್ತದೆ. ೫೦ ಪರ್ಸೆಂಟ್ ಲ್ಯಾಂಡ್ ಹರಿಜನ ಗಿರಿಜನರಿಗೆ ಸಿಕ್ಕಬೇಕೆಂದರೆ, ಇಲ್ಲಿಯೂ ಯಾವರೀತಿ ಅನ್ಯಾಯವಾಗುತ್ತಿದೆ ಎನ್ನುವದು ಗೊತ್ತಾಗುತ್ತದೆ ಎಂಬುದಕ್ಕಾಗಿ ಈ ಪ್ರಶ್ನೆಯನ್ನು ಹಾಕಿದ್ದೇನೆ. ಮಾನ್ಯ ಕಂದಾಯ ಸಚಿವರಿಗೂ ಇದು ಅರ್ಥವಾಗುತ್ತಿತ್ತು. ಇದರ ಜೊತೆಗೆ, ಒತ್ತುವರಿ ಬಗ್ಗೆ ಏಕೆ ಹೇಳಿದೆ ಎಂದರೆ, ಇಲ್ಲಿಯೂ ಅನ್ಯಾಯವಾಗಿದೆ. ಎಸ್ಟೇಟ್ ಓನರ್ಸ್‌ಗೆ ಏನು ನಿಗದಿ ಮಾಡಿದ್ದಾರೆ.....

ಅಧ್ಯಕ್ಷರು :– ಇದರಲ್ಲಿ ಒತ್ತುವರಿಯ ಪ್ರಶ್ನೆಯೇ ಇಲ್ಲ ಮೋಟಮ್ಮನವರೇ

ಶ್ರೀಮತಿ ಮೋಟಮ್ಮ :– ಇದರ ಜೊತೆಗೆ ಒತ್ತುವರಿಯನ್ನೂ ಸೇರಿಸಿಕೊಂಡು ಹೇಳುತ್ತೇನೆ.

ಅಧ್ಯಕ್ಷರು :– ನೀವು, ನಿಮ್ಮ ಪ್ರಶ್ನೆಯಲ್ಲಿ ಒತ್ತುವರಿ ಎಷ್ಟಿದೆ ಎಂಬುದನ್ನೂ ಸೇರಿಸಿದ್ದರೆ ಆಗುತ್ತಿತ್ತು.

ಶ್ರೀಮತಿ ಮೋಟಮ್ಮ :– ಎಸ್‌ಸಿ/ಎಸ್‌ಟಿ ಯವರಿಗೆ ಈ ರೀತಿಯ ಅನ್ಯಾಯವಾಗುತ್ತಿದೆ. ಹರಿಜನ ಗಿರಿಜನರಿಗೆ ಏನೇನು ಸವಲತ್ತು ಕೊಡುತ್ತೇವೆಂದು ಹೇಳಿದರೂ ಸಹ, ಅದು ಕೇವಲ ಕಾಗದದ ಮೇಲೆ ಮಾತ್ರ ಉಳಿಯುತ್ತಿದೆ. ಕಾರ್ಯರೂಪದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ರೀತಿ ಪ್ಲಾಂಟೇಷನ್ ಲ್ಯಾಂಡ ಹಂಚಿಕೆಯಲ್ಲೂ ಸದಾ ಅನ್ಯಾಯವಾಗಿದೆ. ೫೦ ಪರ್ಸೆಂಟ್ ಲ್ಯಾಂಡ್ ಸಿಕ್ಕಿಲ್ಲ. ಒತ್ತುವರಿಯಲ್ಲಿಯೂ ಸಹ ಲ್ಯಾಂಡ್ ಸಿಕ್ಕಿರುವುದಿಲ್ಲ. ಇದಕ್ಕೆ ಏನಾದರೂ ದಾರಿ ಹುಡುಕಬೇಕಾಗುತ್ತದೆ ಎಂದು ನನ್ನ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಅದಕ್ಕೆ ಒಂದು ದಾರಿ ಹುಡುಕಿ ಉತ್ತರ ಕೊಡುತ್ತೇವೆ. ಏಕೆಂದರೆ ಲ್ಯಾಂಡ ಗ್ರ್ಯಾಂಟ್ ರೂಲ್ಸ್ ಪ್ರಕಾರ, ಒತ್ತುವರಿ ಲ್ಯಾಂಡ್ ಪ್ರಶ್ನೆ ಬರುವುದಿಲ್ಲ. ತಾವು ಚಿಕ್ಕಮಗಳೂರಿನಲ್ಲಿ ಕಾಫಿ ಪ್ಲಾಂಟರ್ಸ ಎಷ್ಟು ಇದ್ದಾರೆಂದು ಕೇಳಿದ್ದೀರಿ. ಉತ್ತರ ಕೊಟ್ಟಿದ್ದೇವೆ. ಅದರಲ್ಲಿ ಎಷ್ಟು ಜನ ಹರಿಜನ ಗಿರಿಜನರು ಇದ್ದಾರೆಂದು ಕೇಳಿದ್ದೀರಿ ಅದಕ್ಕೂ ಉತ್ತರ ಕೊಟ್ಟಿದ್ದೇವೆ. ಇವರು ಎಷ್ಟು ಎಕರೆ ಹೊಂದಿದ್ದಾರೆಂದು ಕೇಳಿದ್ದಕ್ಕೂ ಉತ್ತರ ಕೊಟ್ಟಿದ್ದೇವೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಏನಾದರೂ ವ್ಯತ್ಯಾಸವಾದರೆ ಅಥವಾ ಅನ್ ಆಥರೈಸ್ಡ್ ಕಲ್ಟಿವೇಶನ್‌ನಲ್ಲಿ ಹೆಚ್ಚುಕಡಿಮೆಯಾದರೆ ಇದನ್ನು ಯಾವರೀತಿಯಾಗಿ ಸರಿಪಡಿಸುತ್ತೀರಿ ಎಂದು ಕೇಳಿದರೆ, ಆದಕ್ಕೆ ಏನಾದರೊಂದು ಪರಿಹಾರ ಕಂಡುಹಿಡಿಯೋಣ. ಯಾವರೀತಿಯಾಗಿ ಸಹಾಯ ಮಾಡಬೇಕೋ ಮಾಡೋಣ. ಈಗ ಇರತಕ್ಕಂತಾದ್ದರ ಮೇಲೆ ೬೦–೭೦ ಪರ್ಸೆಂಟ್ ಕೊಡಬೇಕೇ ಅಥವಾ ಕಂಪ್ಲೀಟ್ ಅವರಿಗೇ ಕೊಟ್ಟು ಸರಿಪಡಿಸಬೇಕೇ ಎನ್ನುವುದನ್ನು ವಿಚಾರ ಮಾಡೋಣ. ಆದರೆ ಈ ಪ್ರಶ್ನೆಯಲ್ಲಿ ತಾವು ಹೇಳಿದ್ದು ಉದ್ಭವವಾಗುವುದಿಲ್ಲ. ಇದಕ್ಕೆ ಉತ್ತರವನ್ನೂ ಸಹ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕರಿಯಣ್ಣ :- ಅಧ್ಯಕ್ಷರೇ, ನಮ್ಮ ರೆವಿನ್ಯೂ ಮಿನಿಸ್ಟರಿಗೆ ಗೊತ್ತಾಗಿದೆ. ಒಂದೆರಡು ಪರ್ಸೆಂಟ್ ಹರಿಜನ ಗಿರಿಜನರು ಕಾಫಿ ಪ್ಲಾಂಟರ್ಸ ಹೊಂದಿದ್ದಾರೆ, ಬಾಕಿಯವರು ಯಾರೂ ಹೊಂದಿರುವುದಿಲ್ಲವೆಂದು ಲೆಕ್ಕಾಚಾರದ ಮೇಲೆ ತಿಳಿದಿದೆ. ಈಗಲಾದರೂ ಸರ್ಕಾರ ಈ ಜಮೀನನ್ನು ಖಾಯಂಗೊಳಿಸಬೇಕಾದರೆ ಉಳಿದಿರತಕ್ಕ ಜಮೀನನ್ನು ಹರಿಜನ ಗಿರಿಜನರಿಗೆ ಮೀಸಲಾಗಿಡುತ್ತೀರಾ ನೂರಕ್ಕೆ ನೂರು ಬಾಗ ಹರಿಜನ ಗಿರಿಜನರಿಗೆ ಕೊಡುತ್ತೀರಾ ಎನ್ನುವುದು ತಿಳಿಯಲು ಈ ಪ್ರಶ್ನೆಯನ್ನು ಹಾಕಿದ್ದಾರೆ. ದಯವಾಡಿ ಇಷ್ಟಾದರೂ ಮಾಡುತ್ತೀರಾ ಎನ್ನುವುದಕ್ಕೆ ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಪರಿಶೀಲಿಸುತ್ತೇನೆ.

ಶ್ರೀಮತಿ ಮೋಟಮ್ಮ :- ಮಾನ್ಯ ಕಂದಾಯ ಸಚಿವರು ಅರ್ಥಮಾಡಿಕೊಂಡಿರುವುದು "ಅಳಿಯ ಅಲ್ಲ ಮಗಳ ಗಂಡ" ಎನ್ನುವ ಅರ್ಥ ಗೊತ್ತಾಗಲಿಲ್ಲ ಎಂದ ಹಾಗಾಯಿತು. ನಮ್ಮ ಟೋಟಲ್ ಅಭಿಪ್ರಾಯ ಇಷ್ಟು. ಹರಿಜನ ಗಿರಿಜನರಿಗೆ ೫೦ ಪರ್ಸೆಂಟ್ ಭೂಮಿ ಸಿಗಬೇಕು. ಇದು ಪ್ಲಾಂಟೇಷನ್ ಲ್ಯಾಂಡನಲ್ಲಿ ಸಹ ಸಿಕ್ಕೆಲ್ಲ.

ಅಧ್ಯಕ್ಷರು :- ನಿಮ್ಮ ಟೋಟಲ್ ಅಭಿಪ್ರಾಯ ಅರ್ಥವಾಯಿತು. ಆದರೆ ನಿಮ್ಮ ಪ್ರಶ್ನೆ ಮಾತ್ರ ಸೀಮಿತವಾಗಿದೆಯಲ್ಲ!

೧೨-೦೦ ಪಿ.ಎಂ.

ಶ್ರೀಮತಿ ಮೋಟಮ್ಮ :- ನಾನು ಕೇಳುತ್ತಿರುವುದು ಏನೆಂದರೆ, ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಹರಿಜನರಿಗೆ ಗಿರಿಜನರಿಗೆ ಶೇಕಡಾ ೫೦ ರಷ್ಟು ಭೂಮಿ ಸಿಗಬೇಕು ಆದರೆ ಸಿಕ್ಕಿಲ್ಲ. ಹಿಂದೆ ಎಸ್ಟೇಟ್ ಓನರ್ಸ್‌ಗೆ ಲ್ಯಾಂಡ್ ಗ್ರ್ಯಾಂಟ್ ಮಾಡಿರುತ್ತಾರೆ. ಅದರಲ್ಲಿ ಸಹ ಅವರಿಗೆ ಭೂಮಿ ಸಿಕ್ಕಿಲ್ಲ. ಒತ್ತುವರಿ ಕನ್‌ಫರ್ಮೇಷನ್‌ನಲ್ಲೂ ಅವರಿಗೆ ಸಿಗುವುದಿಲ್ಲ. ಒಟ್ಟಿನಲ್ಲಿ ನೀವು ಅವರಿಗೆ ನ್ಯಾಯ ಒದಗಿಸಿಕೊಡಬೇಕು. ೫೦ ಪರ್ಸೆಂಟ್ ಲ್ಯಾಂಡ್‌ನ್ನು ಹರಿಜನ ಗಿರಿಜನರಿಗೆ ಸಿಗುವ ಹಾಗೆ ಮಾಡುತ್ತೀರಾ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈಗಾಗಲೇ ನಾನು ಪರಿಶೀಲಿಸುತ್ತೇನೆಂದು ಹೇಳಿದ್ದೇನೆ. ಕರಿಯಣ್ಣನವರಿಗೂ ಸಹ ಕೇಳಿದಾಗ ಇದೇ ರೀತಿ ಉತ್ತರ ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ :- ಇಲ್ಲಿ ಪರಿಶೀಲಿಸುವ ಪ್ರಶ್ನೆ ಇಲ್ಲ. ಏನಾದರೂ ಮಾಡಿ ಅವರಿಗೆ ಸಹಾಯ ಮಾಡಬೇಕು.

ಶ್ರೀ ಎ. ಬಿ. ಜಕನೂರ : ಎಸ್. ಸಿ. ಜನರಲ್ಲಿ ಇಷ್ಟು ಜನ ಪ್ಲಾಂಟರ್ಸ್ ಇದ್ದಾರೆ ಎಂದು ಹೇಳಿದ್ದಾರೆ ಅದರಲ್ಲಿ ಮೋಟಮ್ಮನವರೂ ಇದ್ದಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಪಟ್ಟಿಯೇ ಇಲ್ಲವಲ್ಲ.

ಶ್ರೀಮತಿ ಮೋಟಮ್ಮ :– ನಾನು ಪ್ಲಾಂಟರ್ ಆದರೆ ತಪ್ಪೇನು ? ನಮ್ಮ ಅಪ್ಪ ಕಾಫಿ ತೋಟದಲ್ಲಿ ಕಾರ್ಮಿಕರು ಆಗಿದ್ದರು. ನಾನು ಪ್ಲಾಂಟರ್ ಆಗುವುದು ತಪ್ಪೇ ಅಧ್ಯಕ್ಷರೇ ?

ಅಧ್ಯಕ್ಷರು :– ನೀವು ಇನ್ನೂ ಪ್ಲಾಂಟರ್ ಆಗಿಲ್ಲ ಎಂದರೆ, ಅತಿ ಶೀಘ್ರದಲ್ಲೇ ನೀವು ಪ್ಲಾಂಟರ್ ಆಗಬೇಕೆಂಬುದು ಈ ಸದನದ ಬಯಕೆ. ಇದಕ್ಕೆ ಪೂರಕವಾಗಿ ಕಂದಾಯ ಮಂತ್ರಿಗಳು ಪ್ರಯತ್ನ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಆಗಲೇ ಪ್ರಯತ್ನ ಮಾಡಿದ್ದೇವೆ.

ವಿಷಯ : ಹಳಿಯಾಳದಲ್ಲಿ ರಂಗ ಮಂದಿರದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೪ (೧೦೫೨)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆಯ ಎಷ್ಟು ಸ್ಥಳಗಳಲ್ಲಿ ಯುವಜನ ಸೇವಾ ಇಲಾಖೆಯಿಂದ ರಂಗ ಮಂದಿರ ಅಥವಾ ಯುವಕರ ಕೇಂದ್ರಗಳನ್ನು ನಿರ್ಮಿಸಲಾಗಿದೆ ಹಾಗೂ ಇದಕ್ಕಾಗಿ ವೆಚ್ಚವಾದ ಹಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಇಲಾಖೆಯ ವತಿಯಿಂದ ರಂಗ ಮಂದಿರವನ್ನು ಕಟ್ಟಲಾಗಿದೆಯೇ;

ಇ) ಹಾಗಿಲ್ಲವಿದ್ದಲ್ಲಿ ತಾಲ್ಲೂಕಿನಲ್ಲಿರುವ ಯುವಕರ ಅನುಕೂಲಕ್ಕಾಗಿ ರಂಗ ಮಂದಿರ ಅಥವಾ ಯುವಕ ಕೇಂದ್ರಗಳನ್ನು ನಿರ್ಮಿಸಲು ಸರಕಾರ ಕ್ರಮ ಕೈಗೊಳ್ಳುತ್ತಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) :– ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈ ಕೆಳಗಿನ ಅನುಕೂಲತೆಗಳನ್ನು ಒದಗಿಸಲು ಕ್ರಮ ಕೈಕೊಳ್ಳಲಾಗಿದೆ.

೧) ಕಾರವಾರ ಜಿಲ್ಲಾ ರಂಗ ಮಂದಿರ ಕಟ್ಟುವುದು,